ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಸರಕಾರಕ್ಕೆ ಬರಬೇಕಾದ ಕ್ಲಿನಿಕಲ್ ಶುಲ್ಕ.

385 – ಶ್ರೀ ಗುರುವಾದಪ್ಪ ನಾಗಮಾರಪಲ್ಲಿ (ಜಿರಾದ್) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ವಿವಿಧ ವೈದ್ಯಕೀಯ ಕಾಲೇಜುಗಳಿಂದ ಸರ್ಕಾರಕ್ಕೆ ಬರಬೇಕಾದ ಕ್ಲಿನಿಕಲ್ ಶುಲ್ಕದ ಮೊತ್ತವೆಷ್ಟು ? (ಬಾಕಿ ಬರಬೇಕಾಗಿರುವ ವೈದ್ಯಕೀಯ ಕಾಲೇಜುಗಳ ಹೆಸರು, ಎಷ್ಟು ಅವಧಿಯಿಂದ ಎಷ್ಟು ಮೊತ್ತದ ಹಣ ಬಾಕಿ ಎಂಬ ವಿವರಗಳನ್ನು ಒದಿಗಿಸುವುದು)

ಆ) ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಬರಬೇಕಾಗಿರುವ ಕ್ಲಿನಿಕಲ್ ಶುಲ್ಕವನ್ನು ವಸೂಲು ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ವಿವಿದ ಖಾಸಗೀ ಕಾಲೇಜುಗಳಿಂದ ಬಾಕಿ ಇರುವ ಮೊತ್ತ ರೂ. 700,95,682-00 ಆಗಿರುತ್ತದೆ. ವೈದ್ಯಕೀಯ ಕಾಲೇಜುಗಳ ಹೆಸರು ಮತ್ತು ಯಾವ ಅವಧಿಯಿಂದ ಬಾಕಿ ಇದೆ ಹಾಗೂ ಬಾಕಿ ಇರುವ ಮೊತ್ತದ ವಿವರಗಳನ್ನು ಪ್ರತ್ಯೇಕ ಪಟ್ಟಿಯಲ್ಲಿ ಲಗತ್ತಿಸಲಾಗದಿ.

ಆ) ಖಾಸಗಿ ವೈದ್ಯಕೀಯ ಕಾಲೇಜುಗಳಿಂದ ಬರಬೇಕಾಗಿರುವ ಕ್ಲಿನಿಕಲ್ ಶುಲ್ಕವನ್ನು ವಸೂಲು ಮಾಡಲು ಸಂಬಂದಪಟ್ಟ ವೈದ್ಯಕೀಯಯ ಕಾಲೇಜುಗಳ ಪ್ರಾಂಶುಪಾಲರಿಗೆ ಹಾಗೂ ಸರ್ಕಾರಿ ಆಸ್ಪತ್ರೆಯ ಅಧೀಕ್ಷಕರಿಗೆ ಸೂಚನೆಯನ್ನು ನೀಡಲಾಗಿದೆ. ಕ್ಲಿನಿಕಲ್ ಶುಲ್ಕವನ್ನು ಪಾವತಿ ಮಾಡದ ಖಾಸಗೀ ಕಾಲೇಜುಗಳಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಕ್ಲಿನಿಕಲ್ ಸೌಲಭ್ಯ ಒದಗಿಸುವುದನ್ನು ನಿಲ್ಲಿಸಲಾಗುವುದೆಂದು ಸೂಚನೆ ನೀಡಲಾಗಿದೆ.

ಖಾಸಗಿ ಕಾಲೇಜಿನಿಂದ ಬಾಕಿ ಬರಬೇಕಾದ ಕ್ಲಿನಿಕಲ್ ಶುಲ್ಕದ ವಿವರಗಳು

ಕ್ರ ಸಂ	ಸಂಸ್ಥೆಗಳ ಹೆಸರು	ಬಾಕಿ ಶುಲ್ಕ	ಷರಾ
1.	ಕೆಂಪೇಗೌಡ ವೈದ್ಯಕೀಯ ವಿದ್ಯಾಸಂಸ್ಥೆ, ಬೆಂಗಳೂರು	66,250-00	ಈ ಬಾಕಿಯು 1-7-94 ರವರೆಗೆ ಆಗಿರುತ್ತದೆ. ಮತ್ತು 1-7-94ರಿಂದ 30-6-95ರವರೆಗಿನ ಅವಧಿಗೆ ಸಂಬಂಧಿಸಿದ ಕ್ಲಿನಿಕಲ್ ಶುಲ್ಕದ ವಸೂಲಾತಿ ಬಗ್ಗೆ ಮಾಹಿತಿಯನ್ನು ನಿರೀಕ್ಷಿಸಲಾಗಿದೆ.
2.	ಡಾ ॥ ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ವಿದ್ಯಾಲಯ, ಬೆಂಗಳೂರು	16,60,182-00	ದಿನಾಂಕ 1-7-1995ರಲ್ಲಿ ಇದ್ದಂತೆ.
3.	ಶ್ರೀ ಸಿದ್ಧಾರ್ಥ ವೈದ್ಯಕೀಯ ವಿದ್ಯಾಲಯ, ತುಮಕೂರು	6,83.000-00	ಈ ಬಾಕಿಯು 1-1-94ರವರೆಗೆ ಆಗಿರುತ್ತದೆ. 1-1-94ರ ನಂತರದ ಅವಧಿಗೆ ಮಾಹಿತಿಯನ್ನು ನಿರೀಕ್ಷಿಸಲಾಗಿದೆ.
4.	ಶ್ರೀ ಆದಿಚುಂಚನಗಿರಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳ್ಳೂರು	ಇಲ್ಲ.	1-1-94ರ ನಂತರದ ಅವಧಿಗೆ ಮಾಹಿತಿಯನ್ನು ನಿರೀಕ್ಷಿಸಲಾಗಿದೆ.
5.	ಶ್ರೀ ದೇವರಾಜ ಅರಸ್ ವೈದ್ಯಕೀಯ ವಿದ್ಯಾಲಯ, ಕೋಲಾರ	ಇ	———"———
6.	ಜೆ.ಜೆ.ಎಂ. ವೈದ್ಯಕೀಯ ವಿದ್ಯಾಲಯ, ದಾವಣಗೆರೆ	22,05,000-00	ಈ ಬಾಕಿಯು 1-1-94ರವರೆಗೆ ಆಗಿರುತ್ತದೆ. 1-1-94ರ ನಂತರದ ಅವಧಿಗೆ ಮಾಹಿತಿಯನ್ನು ನಿರೀಕ್ಷಿಸಲಾಗಿದೆ.
7.	ಜೆ.ಎನ್. ವೈದ್ಯಕೀಯ ಕಾಲೇಜು, ಬೆಳಗಾಂ	20,82,500-00	ದಿನಾಂಕ 1-7-94ರಲ್ಲಿ ಇದ್ದಂತೆ.
8.	ಎಂ.ಆರ್. ವೈದ್ಯಕೀಯ ವಿದ್ಯಾಲಯ, ಗುಲ್ಬರ್ಗಾ	3,98,750-00	ದಿನಾಂಕ 1-7-95ರಲ್ಲಿ ಇದ್ದಂತೆ.
9.	ಅಲ್ ಅಮೀನ್ ವೈದ್ಯಕೀಯ ವಿದ್ಯಾಲಯ, ಬಿಜಾಪುರ	ಇಲ್ಲ	1-7-94ರ ನಂತರದ ಅವಧಿಗೆ ಮಾಹಿತಿಯನ್ನು ನಿರೀಕ್ಷಿಸಲಾಗಿದೆ.
10.	ಕಸ್ತೂರ್ ಬಾ ವೈದ್ಯಕೀಯ ವಿದ್ಯಾಲಯ, ಮಂಗಳೂರು	ಇಲ್ಲ	1-7-1995ರಂದು ಯಾವುದೇ ಬಾಕಿ ಇರುವುದಿಲ್ಲ.